ಸಂಖ್ಯೆ: ಗ್ರಾಅಪ 37ಎಸ್‌ಜೆವೈ 2011[ಎ8]

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 25.07.2013.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,
ಜಿಲ್ಲಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ,
ಚಿಕ್ಕಬಳ್ಳಾಪುರ.

ಮಾನ್ಯರೇ,

ವಿಷಯ: ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ-2011 [ಎಸ್‌ಇಸಿಸಿ-2011 ದಿನಾಂಕ 23.07.2013 ರಂದು ನಡೆದ ಪ್ರಗತಿ ಪರಿಶೀಲನಾ ಸಭೆಗೆ ಜಿಲ್ಲೆಯನ್ನು ಪ್ರತಿನಿಧಿಸಲು ಯಾವುದೇ ಅಧಿಕಾರಿಯನ್ನು ನಿಯೋಜಿಸದಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಸಮ ಸಂಖ್ಯೆ: ಸಭಾ ಸೂಚನಾ ಪತ್ರ ದಿನಾಂಕ 16.07.2013.

-:0:-

ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ-2011ಕ್ಕೆ ಸಂಬಂಧಿಸಿದಂತೆ, ದಿನಾಂಕ 23.07.2013 ರಂದು ಬೆಂಗಳೂರಿನಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಗೆ ನಿಮ್ಮ ಜಿಲ್ಲೆಯನ್ನು ಪ್ರತಿನಿಧಿಸಲು ಅಪರ ಜಿಲ್ಲಾಧಿಕಾರಿ / ಮುಖ್ಯ ಯೋಜನಾ ಅಧಿಕಾರಿಯನ್ನು ನಿಯೋಜಿಸಲು ತಿಳಿಸಲಾಗಿತ್ತು. ಆದರೆ ಸಭೆಗೆ ಯಾವುದೇ ಅಧಿಕಾರಿಯೂ ಹಾಜರಾಗದೇ ಚಿಕ್ಕಬಳ್ಳಾಪುರ ಜಿಲ್ಲೆಯ ಜನಗಣತಿ ಕೆಲಸದ ಪ್ರಗತಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ನಿಮ್ಮ ಜಿಲ್ಲೆಯ ಅಧಿಕಾರಿಗಳು ಸಭೆಗೆ ಹಾಜರಾಗದಿರುವುದನ್ನು ಕಾರ್ಯದರ್ಶಿಗಳು ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಬಗ್ಗೆ ಕೂಡಲೇ ವಿವರಣೆ ನೀಡಲು ಕೋರಿದೆ.

ನಿಮ್ಮ ವಿಶ್ವಾಸಿ,

Hemalatha

(ಪಿ.ಹೇಮಲತ)
ನಿರ್ದೇಶಕರು, [ಸ್ವ ಉಕಾ] ಮತ್ತು
ರಾಜ್ಯದ ಎಸ್‌ಇಸಿಸಿ-2011 ನೋಡಲ್ ಅಧಿಕಾರಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.